# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 8 (52)

ಸದಸ್ಯರ ಹೆಸರು : ಡಾ: ತಳವಾರ್ ಸಾಬಣ್ಣ

ಉತ್ತರಿಸಬೇಕಾದ ದಿನಾಂಕ : 08-12-2025

ಉತ್ತರಿಸುವವರು : ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಳಗಾವಿ ಭೂತರಾಮನಹಟ್ಟಿಯಲ್ಲಿರುವ ರಾಣಿ ಚನ್ನಮ್ಮ ಕಿರು ಮೃಗಾಲಯದಲ್ಲಿ 30 ಕೃಷ್ಣ ಮೃಗಗಳು ಮೃತಪಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಕಿತ್ತೂರು ರಾಣಿ ಚನ್ನಮ್ಮ ಕಿರು ಮೃಗಾಲಯದಲ್ಲಿ ಸಾಂಕ್ರಾಮಿಕ ರೋಗಗಳಿಂದ ಕೃಷ್ಣ ಮೃಗಗಳು ಮೃತಪಟ್ಟಿದ್ದು ದು:ಖಕರವಾದ ಸಂಗಿಯಾಗಿರುತ್ತದೆ.<br><br>ಕಿತ್ತೂರು ರಾಣಿ ಚನ್ನಮ್ಮ ಕಿರು ಮೃಗಾಲಯದಲ್ಲಿ ಕೃಷ್ಣ ಮೃಗಗಳು ಮೃತಪಟ್ಟ ಪ್ರಕರಣದಲ್ಲಿ ಈ ಕೆಳಕಂಡಂತೆ ಕ್ರಮಗಳನ್ನು ತಕ್ಷಣ ಕೈಗೊಳ್ಳಲಾಗಿದೆ. |
| (ಆ) | ಅತ್ಯಮೂಲ್ಯವಾದ ಕೃಷ್ಣ ಮೃಗಗಳು ಮೃತಪಟ್ಟಿರುವುದು ಸಾರ್ವಜನಿಕರಲ್ಲಿ ತೀವ್ರ ಆತಂಕ ಉಂಟು ಮಾಡಿದ್ದು, ಮೂಕ ಪ್ರಾಣಿಗಳ ಸಾವನ್ನು ತಡೆಯಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ: | 1) ಪ್ರಾಣಿ ಆರೋಗ್ಯ ಮತ್ತು ಪಶುವೈದ್ಯ ಜೈವಿಕ ಸಂಸ್ಥೆ, ಹೆಬ್ಬಾಳ, ಬೆಂಗಳೂರು ಇಲ್ಲಿಂದ ನುರಿತ ಪಶುವೈದ್ಯಾಧಿಕಾರಿ ಹಾಗೂ ತಜ್ಞರ ತಂಡವು ಮೃಗಾಲಯಕ್ಕೆ ಭೇಟಿ ನೀಡಿ ಮೃತ ಪ್ರಾಣಿಗಳನ್ನು ಪರಿಶೀಲಿಸಿರುತ್ತಾರೆ.<br><br>2) ನಂತರ ಸಾವಿನ ಕಾರಣ ಪತ್ತೆ ಹಚ್ಚಲು ಮೃತಪಟ್ಟ ಪ್ರಾಣಿಗಳ ಮಾದರಿಯನ್ನು (Blood samples and organs) ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ.<br><br>3) ಮೃಗಾಲಯದಲ್ಲಿರುವ ಬೇರೆ ಪ್ರಾಣಿಗಳಿಗೆ ಸಾಂಕ್ರಾಮಿಕ ರೋಗ ಹರಡದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ.<br><br>4) ಒಟ್ಟು 38 ಕೃಷ್ಣಮೃಗಗಳಲ್ಲಿ 31 ಪ್ರಾಣಿಗಳು ಮೃತಪಟ್ಟಿದ್ದರು, ಉಳಿದಂತಹ 07 ಕೃಷ್ಣಮೃಗಗಳನ್ನು ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳೊಂದಿಗೆ ಸಂರಕ್ಷಿಸಲಾಗಿದೆ.<br><br>ಮೃಗಾಲಯದಲ್ಲಿ 'ಹೆಮರಾಜಿಕ್ ಸೆಪ್ಟಿಸೆಮಿಯಾ' ಸಾಂಕ್ರಮಿಕ ರೋಗ ಹರಡಿರುವ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆ / ಸುರಕ್ಷತಾ ಕ್ರಮಗಳನ್ನು ಅನುಸರಿಸಲು ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧೀನದಲ್ಲಿರುವ ಎಲ್ಲಾ ಮೃಗಾಲಯಗಳ ಕಾರ್ಯನಿರ್ವಾಹಕ ನಿರ್ದೇಶಕರಿಗೆ ಈ ಕೆಳಕಂಡಂತೆ ಸೂಚನೆಗಳನ್ನು ನೀಡಲಾಗಿದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
| --- | --- | --- |
| | | 1) ಎಲ್ಲಾ ಮೃಗಾಲಯ ಪಾಲಕರು ಆವರಣಕ್ಕೆ ಪ್ರವೇಶಿಸುವ ಮೊದಲು ತಮ್ಮ ಬೂಟುಗಳನ್ನು ಸ್ಯಾನಿಟೈಸರ್‌ಗಳಲ್ಲಿ ಅದ್ದಿಡುವುದು, ಕೈಗಳನ್ನು ಸ್ಯಾನಿಟೈಸರ್‌ಗಳಿಂದ ಸ್ವಚ್ಛಗೊಳಿಸುವುದು, ಆವರಣಕ್ಕೆ ಪ್ರವೇಶಿಸುವಾಗ ಮತ್ತು ಹೊರಬರುವಾಗ ಬಟ್ಟೆಗಳನ್ನು ಬದಲಿಸುವುದು ಮುಂತಾದ ಜೈವಿಕ ಸುರಕ್ಷತಾ ಶಿಷ್ಟಾಚಾರಗಳನ್ನು ಅನುಸರಿಸಲು ಸೂಚಿಸಿದೆ.<br><br>2) ಯಾವುದೇ ಪ್ರಾಣಿ ಪಾಲಕರು ತಮ್ಮ ಮನೆಯಲ್ಲಿ ಸಾಕು ಪ್ರಾಣಿಗಳಾದ ಹಸುಗಳು ಅಥವಾ ಇತರ ಸಸ್ಯಹಾರಿ ಪ್ರಾಣಿಗಳನ್ನು ಸಾಕಲಾಗಿದೆಯೇ ಎಂಬುದನ್ನು ಪರಿಶೀಲಿಸುವುದು. ಅವರ ಮನೆಯಲ್ಲಿ ಹಸುಗಳು ಅಥವಾ ಇತರ ಸಸ್ಯಹಾರಿ ಪ್ರಾಣಿಗಳು ಇದ್ದರೆ, ಆ ಸಾಕು ಪ್ರಾಣಿಗಳಿಗೆ HS, FMD ಇತ್ಯಾದಿ ಸಾಮಾನ್ಯ ಪಶು ಕಾಯಿಲೆಗಳ ವಿರುದ್ಧ ಲಸಿಕೆ ಹಾಕಲಾಗಿದೆಯೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.<br><br>3) ಪ್ರಾಣಿಗಳ ಜಾತಿಗಳ ಪ್ರಕಾರ ಪ್ರಾಣಿ ಪಾಲಕರನ್ನು ಪ್ರತ್ಯೇಕಿಸಲು ಕಾಳಜಿ ವಹಿಸಬೇಕು, ವಿಶೇಷವಾಗಿ ಕೃಷ್ಣಮೃಗಳನ್ನು ನಿರ್ವಹಿಸುವ ಪ್ರಾಣಿ ಪಾಲಕರು ಯಾವುದೇ ಇತರ ಜಿಂಕೆ ಜಾತಿಗಳನ್ನು ನಿರ್ವಹಣೆ ಮಾಡಬಾರದು. ಅವರನ್ನು ನಿರ್ದಿಷ್ಟವಾಗಿ ಕೃಷ್ಣಮೃಗಳಿಗೆ ಮಾತ್ರ ನಿಯೋಜಿಸಬೇಕು.<br><br>4) ಮೃಗಾಲಯಗಳ ಸುತ್ತಲಿನ ಸಾಕು ಪ್ರಾಣಿಗಳಿಗೆ ಲಸಿಕೆ ಹಾಕಲಾಗಿದೆಯೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಆಯಾ ಪಶುಸಂಗೋಪನಾ ಇಲಾಖೆಗಳನ್ನು ಸಂಪರ್ಕಿಸಲು ಸೂಚಿಸಿದೆ ಹಾಗೂ ಬೆಳಗಾವಿ ಮೃಗಾಲಯದಲ್ಲಿ ಸಂಭವಿಸಿರುವ HS ಸಾಂಕ್ರಾಮಿಕ ರೋಗದ ಬಗ್ಗೆ ಸ್ಥಳೀಯ ಪಶುಸಂಗೋಪನಾ ಇಲಾಖೆಗೆ ತಿಳಿಸಲು ಸೂಚಿಸಿದೆ.<br><br>5) ಎಲ್ಲಾ ಕಾರ್ಯನಿರ್ವಾಹಕ ನಿರ್ದೇಶಕರು ಆರೋಗ್ಯ ಸಲಹಾ ಸಮಿತಿಯ ಸಭೆಗಳನ್ನು ಸಕಾಲದಲ್ಲಿ ಕರೆಯಲಾಗುತ್ತಿದೆಯೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.<br><br>6) ಮೃಗಾಲಯದಲ್ಲಿನ ಸಾಮಾನ್ಯ ಸ್ವಚ್ಛತಾ ಪದ್ಧತಿಗಳನ್ನು ಪರಿಶೀಲಿಸಲು ವಿಶೇಷ ಆರೋಗ್ಯ ಸಲಹಾ ಸಮಿತಿ ಸಭೆಯನ್ನು ತಕ್ಷಣವೇ ಕರೆಯುವುದು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | 7) ಎಲ್ಲಾ ವಾಹನಗಳು, ವಿಶೇಷವಾಗಿ ಮೃಗಾಲಯದ ಪ್ರಾಣಿಗಳಿಗೆ ಆಹಾರ ಮತ್ತು ಇತರ ವಸ್ತುಗಳನ್ನು ಪೂರೈಸುವಂತಹ ಸೇವಾ ರಸ್ತೆಗಳಲ್ಲಿ ಸಂಚರಿಸುವ ವಾಹನಗಳು, ಮೃಗಾಲಯ ಪ್ರದೇಶಗಳಿಗೆ ಪ್ರವೇಶಿಸುವ ಮೊದಲು ಶುದ್ಧೀಕರಿಸಲಾಗಿದೆ (Sanitised) ಎಂದು ಖಚಿತಪಡಿಸಿಕೊಳ್ಳಬೇಕು.<br><br>8) ನುರಿತ ಪಶುವೈದ್ಯರೊಂದಿಗೆ ಸಮಾಲೋಚಿಸಿ, ಎಲ್ಲಾ ಸಸ್ಯಹಾರಿ ಪ್ರಾಣಿಗಳಿಗೆ ರೋಗನಿರೋಧಕ ಶಕ್ತಿಯನ್ನು ಬಲಪಡಿಸುವಂತಹ ಪೂರಕ ಆಹಾರಗಳನ್ನು ನೀಡಬೇಕು.<br><br>9) ಪ್ರಾಣಿಗಳ ಅನಾರೋಗ್ಯದ ಯಾವುದೇ ಘಟನೆಯನ್ನು ಪಶುವೈದ್ಯರು ಮತ್ತು ಕಾರ್ಯ ನಿರ್ವಾಹಕ ನಿರ್ದೇಶಕರಿಗೆ ವರದಿ ಮಾಡುವಂತೆ ಎಲ್ಲಾ ಪ್ರಾಣಿ ಪಾಲಿಕರಿಗೆ ಸೂಚಿಸಲು ತಿಳಿಸಲಾಗಿದೆ. |
| ಇ) | ಕೃಷ್ಣ ಮೃಗಗಳು ಇಲಾಖೆಯ ಅಧಿಕಾರಿಗಳ ನಿರ್ಲಕ್ಷವೇ ಕಾರಣವಾಗಿದ್ದು, ಆ ಅಧಿಕಾರಿಗಳ ಮೇಲೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ; | ಮೃಗಾಲಯದಲ್ಲಿ ನುರಿತ ವೈದ್ಯರು ಹಾಜರಿದ್ದು, ನಿರಂತರವಾಗಿ ವೈದ್ಯಕೀಯ ತಪಾಸಣೆ ನಡೆಸುತ್ತಿರುತ್ತಾರೆ.<br><br>ಕೃಷ್ಣ ಮೃಗಗಳು 'ಹೆಮರಾಜಿಕ್ ಸೆಪ್ಟಿಸೆಮಿಯಾ' ಸಾಂಕ್ರಾಮಿಕ ರೋಗದಿಂದ ಮರಣ ಹೊಂದಿರುವುದು ಪ್ರಯೋಗಾಲಯದ ವರದಿಯಿಂದ ದೃಢಪಟ್ಟಿರುವುದರಿಂದ, ಮೇಲ್ನೋಟಕ್ಕೆ ಕರ್ತವ್ಯ ನಿರ್ಲಕ್ಷ ಕಂಡುಬಂದಿರುವುದಿಲ್ಲ.<br><br>ಈಗಾಗಲೇ ಸದರಿ ಪ್ರಕರಣದ ಕುರಿತು ಪರಿಶೀಲನೆ ನಡೆಸಿ, ವರದಿ ನೀಡಲು ಸರ್ಕಾರದಿಂದ ಸೂಚನೆ ನೀಡಲಾಗಿದ್ದು, ಅಂತಿಮ ವರದಿ ನೀರಿಕ್ಷಿಸಲಾಗಿದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಈ) | ವೈದ್ಯರು ಮತ್ತು ಅಧಿಕಾರಿಗಳು ಸೂಕ್ತ ಸಮಯದಲ್ಲಿ ನಿಗಾವಹಿಸಿ ಕ್ರಮ ಕೈಗೊಂಡಿದ್ದರೆ ಈ ಸಾವುಗಳು ತಡೆಗಟ್ಟಬಹುದಿತ್ತಲ್ಲವೆ; | ಮೃಗಾಲಯದಲ್ಲಿ ವೈದ್ಯಾಧಿಕಾರಿಗಳು ಹಾಜರಿದ್ದು, ಮಾರ್ಗಸೂಚಿಗಳನ್ವಯ ವನ್ಯಜೀವಿಗಳ ಆರೋಗ್ಯ ತಪಾಸಣೆ ನಡೆಸುತ್ತಿದ್ದು, ಅನಿರೀಕ್ಷಿತವಾಗಿ ಸಾಂಕ್ರಾಮಿಕ ರೋಗ ಹರಡಿದ ಕಾರಣ ಕೃಷ್ಣಮೃಗಗಳು ಮೃತಪಟ್ಟಿರುವುದು ವರದಿಯಾಗಿರುತ್ತದೆ.<br><br>ಈ ಪ್ರಕರಣದಲ್ಲಿ ಪಶುವೈದ್ಯಕೀಯ ತಂಡವು ಮೃಗಾಲಯಕ್ಕೆ ಭೇಟಿ ನೀಡಿದ ತಕ್ಷಣ ಪ್ರಥಮ ಹಂತದಲ್ಲಿ ಪ್ರಾಣಿಗಳಿಗೆ antibioticಗಳನ್ನು ನೀಡಿದ್ದಾಗ್ಯೂ ದಿನಾಂಕ: 15.11.2025ರಂದು 21-ಕೃಷ್ಣ ಮೃಗಗಳು, ದಿನಾಂಕ: 16.11.2025 ರಂದು 1- ಕೃಷ್ಣಮೃಗ, ಮತ್ತು 17.11.2025 ರಂದು 01-ಕೃಷ್ಣಮೃಗ ಸಾವನ್ನಪ್ಪಿರುತ್ತವೆ. ಆದರೆ ಪಶುವೈದ್ಯಕೀಯ ತಂಡವು ಕರ್ನಾಟಕ ಮತ್ತು ಗುಜರಾತ್‌ನ ತಜ್ಞ ವೈದ್ಯರ ಮಾರ್ಗದರ್ಶನದಲ್ಲಿ ಸರಿಯಾದ ಚಿಕಿತ್ಸೆಯನ್ನು ಮುಂದುವರೆಸಿ, ಅಂತಿಮವಾಗಿ 07 ಕೃಷ್ಣಮೃಗಗಳನ್ನು ಸಂರಕ್ಷಿಸಲಾಗಿರುತ್ತದೆ. ಅಲ್ಲದೆ, ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡ ಕಾರಣ, ಮೃಗಾಲಯದಲ್ಲಿನ ಇತರೆ ಪ್ರಾಣಿಗಳಿಗೆ ರೋಗ ಹರಡದಂತೆ ಪಶು ವೈದ್ಯಾಧಿಕಾರಿಗಳು/ ಅಧಿಕಾರಿಗಳು ಕ್ರಮವಹಿಸಿರುತ್ತಾರೆ.<br><br>'ಹೆಮರಾಜಿಕ್ ಸೆಪ್ಟಿಸೆಮಿಯಾ' ಸಾಂಕ್ರಾಮಿಕ ರೋಗದಿಂದ ಬಳಲುವ ಕೃಷ್ಣಮೃಗಗಳಲ್ಲಿ ಹೊರಗಿನಿಂದ ಯಾವುದೇ ರೋಗ ಲಕ್ಷಣಗಳು ಕಂಡುಬಂದಿರುವುದಿಲ್ಲ ಹಾಗೂ ಈ ರೋಗ ಹರಡಿದ ತಕ್ಷಣ 6 ರಿಂದ 24 ಘಂಟೆಗಳಲ್ಲಿ ಪ್ರಾಣಿಗಳು ಸಾವನ್ನಪ್ಪಿರುತ್ತವೆ. ಆದ್ದರಿಂದ, ಪಶುವೈದ್ಯಾಧಿಕಾರಿಗಳಿಗೆ ಈ ರೋಗವನ್ನು ತಡೆಹಿಡಿಯಲು ಸಮಯಾವಕಾಶ ಕಡಿಮೆ ಇರುತ್ತದೆ. |
| ಉ) | ಈ ಕಿರು ಮೃಗಾಲಯದಲ್ಲಿ ಮೇಲಿಂದ ಮೇಲೆ ಪ್ರಾಣಿಗಳ ಸಾವು ಆಗುತ್ತಿರುದವರಿಂದ ಇದನ್ನು ತಡೆಗಟ್ಟಲು ಸರ್ಕಾರವು ಯಾವ ರೀತಿಯ ಪರಿಹಾರಗಳನ್ನು ಕೈಗೊಳ್ಳುವುದು? | ಈ ಕಿರು ಮೃಗಾಲಯದಲ್ಲಿ ಸದರಿ ಪ್ರಕರಣ ಹೊರತುಪಡಿಸಿ, ಈ ಹಿಂದೆ ಯಾವುದೇ ಅಸಹಜ (abnormal) ರೀತಿಯಲ್ಲಿ ಪ್ರಾಣಿಗಳ ಸಾವು ವರದಿಯಾಗಿರುವುದಿಲ್ಲ.<br><br>ಮೃಗಾಲಯದಲ್ಲಿ ಪ್ರಾಣಿಗಳ ಸಂರಕ್ಷಣೆ ಹಾಗೂ ಆರೋಗ್ಯ ಹಿತದೃಷ್ಟಿಯಿಂದ **ಅನುಬಂಧ-1ರಲ್ಲಿ** ಲಗತ್ತಿಸಿರುವ ಉಪಕ್ರಮಗಳನ್ನು ಜಾರಿಗೊಳಿಸಲಾಗುತ್ತಿದೆ. |

ಸಂಖ್ಯೆ: ಅಪಜೀ 315 ಎಫ್ ಡಬ್ಲ್ಯೂ ಎಲ್ 2025

**(ಈಶ್ವರ ಬಿ. ಖಂಡ್ರೆ)**
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

ಅನುಬಂಧ-1

**Common veterinary practices in Zoos are being implemented in zoos to ensure the protection and well-being of animals.**

Zoo veterinary practice is a specialized field that encompasses wildlife medicine, preventive health management, biosecurity, nutrition, and conservation. The primary goal is to enhance the health, welfare, and longevity of all animals.

## 1. Preventive health measures

**a) Regular health check-ups**

Visual and if possible manual health checks

Observing gait, appetite, defecation, walking and body language

Regular weight records

**b) Vaccination programs**

Vaccination schedule based on animal category (e.g. rabies for carnivores, tetanus for horses)

Use of vaccines safe for wildlife

**c) Deworming**

Regular deworming according to different species

Checking the level of internal parasites through stool examination

Control of external parasites and cleanliness of the habitat

**d) Quarantine (isolation) measures**

30–90 days quarantine for new animals

Checking for infectious diseases and parasites

Strict isolation with dedicated staff and equipment

## 2. Nutrition and food management

**a) Diet formulation**

- Preparation of food appropriate for each animal species
- Balanced nutritional supply
- Seasonal change of diet

**b) Food quality and cleanliness**

- Storage of fresh and clean food
- Proper storage methods (cooling, dry storage, pest control)
- Microbiological testing of food and water

**c) Feeding schedule**

- Feeding at fixed times
- Enrichment feeding to encourage natural foraging
- Health assessment from leftover food

## 3. Diagnostic measures

### a) Laboratory tests

- Blood tests (hematology, biochemistry)
- Stool and urine tests
- Bacterial/fungal culture, cytology

### b) Imaging

- Radiography, ultrasound, endoscopy
- CT/MRI (outpatient help if necessary)

### c) Postmortem examination (necropsy)

- Complete necropsy to determine cause of death
- Collection of artefacts and histopathology
- Documentation of photographs and reports

## 4. Medical treatment and management

### a) Medical care

- Treatment of problems caused by injuries, infections, parasites
- Use of antibiotics, painkillers, anti-inflammatory drugs
- Collection of medical records for each animal

### b) Surgery

- Minor and major surgeries
- Operating room, sutures and anesthesia system
- Pre- and post-operative management

### c) Anesthesia

- Species-specific anesthesia protocol
- Chemical immobilization by dart
- Vital signs monitoring

## 5. Reproduction and reproductive management

- Regular reproductive tests (ultrasound, hormone tests)
- ART (Assisted Reproductive Techniques) if necessary
- Pregnancy monitoring
- Neonatal care of newborn chicks/birds

## 6. Behavior and welfare monitoring

- Stress, aggression or unusual behavior
- Environmental enrichment (enrichment tools, structures, puzzles)
- Social group adaptation assessment
- Welfare assessment based on the Five Domains Model

7. Records and documentation

- Medical records for each animal
- Daily reports by keepers
- Vaccination, deworming, drug storage registers
- Sickness and death reports

**8. Biosecurity and zoonotic disease control**

- Cleanliness of housing and hospitals
- Use of PPE (especially in primates and food animals)
- Rabies, TB, Avian influenza surveillance
- Pest control

**9. Emergency treatment and critical care**

- SOP for emergency response to fights, injuries, poisoning, accidental diseases
- First-aid kit in each area
- Separate ward for infectious diseases
- Assistance from outside veterinary hospitals if necessary

**10. Support for conservation and research**

- Participation in breeding programs (CZA, WAZA)
- Studbook and pedigree management
- Nutrition, behavior, disease, reproductive research
- Cooperation in rescue and rehabilitation activities

**11. Staff training and coordination**

- Keepers to recognize the early signs of disease Training
- Animal handling and emergency training
- Zoonosis, welfare, nutrition workshops
- Regular engagement of veterinarians, curators, keepers

**12. Compliance with laws and regulations**

- Compliance with Wildlife Protection Act and guidelines of the authority
- Health reports and audit records
- Drug storage and controlled use
- Birth, death, transfer records and reporting